**ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಸುಳ್ಯ, ದ.ಕ. ಇವರ ನ್ಯಾಯಾಲಯದಲ್ಲಿ –**

**ಸಿ.ಸಿ.ನಂ. 737/2021**
**ಸಿ.ಡಬ್ಲ್ಯೂ–1**
**ಪಿ.ಡಬ್ಲೂ –1**

ಸಾಕ್ಷಿದಾರರ ಹೆಸರು : ಗುರುಪ್ರಸಾದ್ ಎ.

ತಂದೆಯ ಹೆಸರು : ಸೋಮಪ್ಪ ಗೌಡ

ವಯಸ್ಸು : 53 ವರ್ಷ

ಉದ್ಯೋಗ : ಪಿ.ಡಿ.ಒ. ದೇವಚಳ್ಳ ಗ್ರಾಮ ಪಂಚಾಯತ್.

ವಾಸ : ಪಂಜ ಮನೆ, ಐವತ್ತೊಕ್ಲು ಗ್ರಾಮ, ಸುಳ್ಯ ತಾಲೂಕು.ದ.ಕ.

ದಿನಾಂಕ : 15–07–2025.

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

## ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ಕಳೆದ 13 ವರ್ಷಗಳಿಂದ ದೇವಚಳ್ಳ ಗ್ರಾಮ ಪಂಚಾಯತ್ ನಲ್ಲಿ ಪ್ರಭಾರ ಪಿ.ಡಿ.ಒ. ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ 09–06–2021 ರಂದು ಕೋವಿಡ್ ಸಮಯಾದ ಕಾರಣ ಸೋಂಕು ಹರಣದಂತೆ ತಡೆಗಟ್ಟಲು ಜಿಲ್ಲಾಧಿಕಾರಿಯವರು ಮತ್ತು ತಾಲೂಕು ದಂಡಾಧಿಕಾರಿಯವರ ಆದೇಶದಂತೆ ನಾವು ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಒಂದು Task Force ಸಮಿತಿಯನ್ನು ರಚನೆ ಮಾಡಿದ್ದು, ನಮ್ಮ ಗ್ರಾಮ ಪಂಚಾಯತಿಗೆ ಸೇರಿದ ಎಲ್ಲಾ ಹಳ್ಳಿಗಳ ಸೋಂಕಿತರ ಮನೆಗಳಿಗೆ ತೆರಳಿ, ಅವರನ್ನು isolation ಮಾಡುವ ಕ್ರಮವನ್ನು ಕೈಗೊಂಡಿದ್ದು, ಅದರಂತೆ ಸೋಂಕಿತ ಆರೋಪಿಯನ್ನು home isolation ನಲ್ಲಿ ಇರುವಂತೆ ನಾವು

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಈ ಹಿಂದೆ ಸೂಚಿಸಿದ್ದರೂ ಸಹ ಆರೋಪಿಯು ಕಂದ್ರಪ್ಪಾಡಿ ಎಂಬಲ್ಲಿ ಸಾರ್ವಜನಿಕವಾಗಿ ಜೀಪಿನಲ್ಲಿ ತಿರುಗಾಡುತ್ತಿದ್ದು, ಅವರಿಂದ ಇತರರಿಗೆ ಸೋಂಕು ಹರಡುವ ರೀತಿಯಲ್ಲಿ ತಿರುಗಾಡುತ್ತಿದ್ದರು.

ದಿನಾಂಕ 14-06-2021 ರಂದು ಆಗಿನ ಗ್ರಾಮ ಪಂಚಾಯತಿನ ಅಧ್ಯಕ್ಷರಾಗಿದ್ದ ಸುಲೋಚನ ಹಾಗೂ ನಾನು ಸದರಿ ಗ್ರಾಮಕ್ಕೆ ಹೋಗಿ ಪರಿಶೀಲಿಸಿದಾಗ, ಅಲ್ಲಿ ಸೋಂಕಿತ ಆರೋಪಿಯು ಸಾರ್ವಜನಿಕವಾಗಿ ಓಡಾಡುವುದು ನಮಗೆ ಕಂಡು ಬಂದಿರುತ್ತದೆ.

ಸದರಿ ಆರೋಪಿಯನ್ನು ನಾವು home isolation ನಲ್ಲಿ ಇರುವಂತೆ ಸೂಚಿಸಿದ್ದರೂ ಸಹ ದಿನಾಂಕ 15-06-2021 ರಂದು ನಮ್ಮ task force ಸಮಿತಿಯಲ್ಲಿ ಸಭೆಯು ಇದ್ದು, ಆರೋಪಿಯನ್ನು ಕೋವಿಡ್ ಸೆಂಟರಿಗೆ ದಾಖಲು ಮಾಡಬೇಕೆಂದು ನಮ್ಮ ಸಮಿತಿಯಲ್ಲಿ ನಿರ್ಣಯವಾಗಿದ್ದು, ನಾವು ಸುಳ್ಯದ ತಹಶೀಲ್ದಾರರ ಗಮನಕ್ಕೆ ತಂದು ಆರೋಪಿಯನ್ನು ಕೋವಿಡ್ ಸೆಂಟರಿಗೆ ದಾಖಲು ಮಾಡುವಂತೆ ತೀರ್ಮಾನಿಸಿ, ನಾವೆಲ್ಲ ಸಮಿತಿಯವರು ಸೇರಿ ಆರೋಪಿಯನ್ನು ಕೋವಿಡ್ ಸೆಂಟರಿಗೆ ಕಳುಹಿಸಲು ನಾವು ಆರೋಪಿಯ ಮನೆಗೆ ಆ್ಯಂಬುಲೆನ್ಸ್ ನ್ನು ಕರೆಸಿರುತ್ತೇವೆ. ಆಗ ಆರೋಪಿಯು " ನನ್ನನ್ನು ಕೋವಿಡ್ ಕೇಂದ್ರಕ್ಕೆ ಹಾಕಿದಲ್ಲಿ ನನಗೆ ದಿನವೊಂದಕ್ಕೆ ರೂ.60,000/- ನಷ್ಟವಾಗುತ್ತದೆ " ಎಂದು ಹೇಳಿ " ನನ್ನನ್ನು ಕೋವಿಡ್ ಕೇಂದ್ರಕ್ಕೆ ದಾಖಲಿಸಿದಲ್ಲಿ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ " ಎಂದು

ಸಾಕ್ಷಿಯ ಸಹಿ                    ನ್ಯಾಯಾಧೀಶರ ಸಹಿ

ನಮಗೆ ಕೊಲೆ ಬೆದರಿಕೆ ಒಡ್ಡಿ, ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ನಂತರ ಆರೋಪಿಯು ನನ್ನನ್ನು ಅವರ ಕೈಯಿಂದ ತಳ್ಳಿ, ತಪ್ಪಿಸಿಕೊಂಡು ಹೋಗಿರುತ್ತಾರೆ. ನಾನು ಸದರಿ ವಿಚಾರವನ್ನು ಸುಳ್ಯದ ತಹಶೀಲ್ದಾರರ ಗಮನಕ್ಕೆ ತಂದಿರುತ್ತೇನೆ. ಸುಳ್ಯದ ತಹಶೀಲ್ದಾರರು ಆರೋಪಿಯನ್ನು ಕೋವಿಡ್ ಕೇಂದ್ರಕ್ಕೆ ದಾಖಲಿಸಬೇಕಾಗಿ ಆದೇಶಿಸಿರುತ್ತಾರೆ.

ಸದರಿ ದಿನದಂದು ಆರೋಪಿಯು ಗುತ್ತಿಗಾರು ಗ್ರಾಮದ ಉರುಂಬಿ ಎಂಬಲ್ಲಿಯ ಆರೋಪಿಯ ತೋಟದ ಹಂಚಿನ ಮನೆಯಲ್ಲಿ ಅವಿತು ಕುಳಿತಿರುವುದಾಗಿ ಪೊಲೀಸರಿಂದ ಸಂಜೆ 4.00 ಗಂಟೆಗೆ ನಮಗೆ ಮಾಹಿತಿ ಬಂದ ಮೇರೆಗೆ, ನಾವು ನಮ್ಮ ಸಮಿತಿಯವರು, ಪೊಲೀಸರು, ಆರೋಗ್ಯ ಇಲಾಖೆಯವರು, ಗ್ರಾಮ ಲೆಕ್ಕಾಧಿಕಾರಿಯವರು ಸದರಿ ಗುತ್ತಿಗಾರು ಗ್ರಾಮದ ಉರುಂಬಿ ಎಂಬಲ್ಲಿಯ ಆರೋಪಿಯ ತೋಟದ ಹಂಚಿನ ಮನೆಗೆ ಹೋಗಿರುತ್ತೇವೆ. ಸದರಿ ಸ್ಥಳದಲ್ಲಿ ನಾವು ಪರಿಶೀಲಿಸಿದಾಗ, ಆರೋಪಿಯು ಸದರಿ ಸ್ಥಳದಲ್ಲಿ ಅಡಗಿ ಕುಳಿತಿರುವುದು ನಮ್ಮ ಗಮನಕ್ಕೆ ಬಂದಿದ್ದು, ನಾವು ಅವರನ್ನು ಕೋವಿಡ್ ಕೇಂದ್ರಕ್ಕೆ ದಾಖಲು ಮಾಡಿರುತ್ತೇವೆ.

ಆರೋಪಿಯನ್ನು ಕೋವಿಡ್ ಕೇಂದ್ರಕ್ಕೆ ದಾಖಲು ಮಾಡುವಾಗ ರಾತ್ರಿಯಾಗಿದ್ದು, ನಾವು ನಮ್ಮ ಮೇಲಧಿಕಾರಿಯವರಿಗೆ ಸದರಿ ವಿಚಾರವನ್ನು ತಿಳಿಸಿ, ಮರುದಿನ ಠಾಣೆಗೆ ಹೋಗಿ ಘಟನೆಯ ಕುರಿತು ದೂರನ್ನು ನೀಡಿರುತ್ತೇವೆ. ಸದರಿ ಪಿರ್ಯಾದಿಯನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದು, ಅದನ್ನು

ನಿಪಿ–1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

ದಿನಾಂಕ 19–06–2021 ರಂದು ಪೊಲೀಸರು ತಕ್ಷೀರು ಸ್ಥಳಕ್ಕೆ ಬಂದು ಸ್ಥಳ ಮಹಜರನ್ನು ಮಾಡಿರುತ್ತಾರೆ. ತಕ್ಷೀರು ಸ್ಥಳದ ಮಹಜರನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಸ್ಥಳ ಮಹಜರು ಮಾಡುವ ಸಮಯದಲ್ಲಿ ಚಾ.ಸಾ.9 ಹಾಗೂ ಚಾ.ಸಾ.10 ರವರು ಹಾಜರಿದ್ದರು. ಸದರಿ ನಿಪಿ–2 ರ ಮಹಜರನ್ನು ಸುಮಾರು ಬೆಳಗ್ಗೆ 11.00–12.00 ಗಂಟೆಯವರೆಗೆ ಪೊಲೀಸರು ಜರಗಿಸಿರುತ್ತಾರೆ.

ಮಹಜರನ್ನು ಪೊಲೀಸರು ಮೊದಲು ಆರೋಪಿಯ ಮನೆಯಾದ ಕಂದ್ರಪ್ಪಾಡಿ ಎಂಬಲ್ಲಿ ತಯಾರಿಸಿದ್ದು, ನಂತರ ಅದೇ ದಿನ ಆರೋಪಿಯು ಅವಿತು ಕುಳಿತಿದ್ದ ಉರುಂಬಿ ಎಂಬಲ್ಲಿ ಸ್ಥಳ ಮಹಜರನ್ನು ತಯಾರಿಸಿರುತ್ತಾರೆ. ಆರೋಪಿಯು ಅವಿತು ಕುಳಿತಿದ್ದ ಉರುಂಬಿ ಎಂಬಲ್ಲಿ ಮಹಜರನ್ನು ತಯಾರಿಸುವ ಸಮಯದಲ್ಲಿ ನಾನು ಘಟನಾ ಸ್ಥಳವನ್ನು ಪೊಲೀಸರಿಗೆ ನಾನು ತೋರಿಸಿಕೊಟ್ಟಿದ್ದು , ಆ ಸಮಯ ಚಾ.ಸಾ.11 ಹಾಗೂ 12 ರವರು ಹಾಜರಿದ್ದರು. ಮೊದಲ ಮಹಜರು ತಯಾರಿಸಿದ ನಂತರ ಆರೋಪಿಯು ಅವಿತು ಕುಳಿತಿದ್ದ ಉರುಂಬಿ ಎಂಬಲ್ಲಿ ಪೊಲೀಸರು ಇನ್ನೊಂದು ಮಹಜರನ್ನು ತಯಾರಿಸಿರುತ್ತಾರೆ. ಆರೋಪಿಯು ಅವಿತು ಕುಳಿತಿದ್ದ ಉರುಂಬಿ

ಎಂಬಲ್ಲಿ ಪೊಲೀಸರು ಮಾಡಿದ ಸ್ಥಳ ಮಹಜರನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಆರೋಪಿಯು ಗ್ರಾಮದಲ್ಲಿ ಸಂಚರಿಸುತ್ತಿದ್ದ ಸಮಯ ನಾನು ನನ್ನ ಮೊಬೈಲ್ ನಲ್ಲಿ ಚಿತ್ರೀಕರಣ ಹಾಗೂ ಛಾಯಾಚಿತ್ರ ಸೆರೆ ಹಿಡಿದಿದ್ದು, ಸದರಿ ಛಾಯಾಚಿತ್ರಕ್ಕೆ ಸಂಬಂಧಿಸಿ ನಾನು ಸಿ.ಡಿ.ಗೆ ವರ್ಗಾಯಿಸಿರುತ್ತೇನೆ. ನಾನು ಸದರಿ ಸಿ.ಡಿ.ಯನ್ನು ಪೊಲೀಸರಿಗೆ ನೀಡಿರುತ್ತೇನೆ. ಸಿ.ಡಿ.ಯನ್ನು ಪೊಲೀಸರು ಮಹಜರು ಮುಖೇನ ಸ್ವಾಧೀನಪಡಿಸಿಕೊಂಡಿದ್ದು, ಸದರಿ ಮಹಜರನ್ನು ಪೊಲೀಸರು ತಯಾರಿಸುವ ಸಮಯದಲ್ಲಿ ಚಾ.ಸಾ.11 ಹಾಗೂ ಚಾ.ಸಾ.12 ರವರು ಹಾಜರಿದ್ದರು. ಸದರಿ ಸಿ.ಡಿ.ಗೆ ಸಂಬಂಧಿಸಿದಂತೆ ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿರಡಿಯಲ್ಲಿ ಪ್ರಮಾಣಪತ್ರವನ್ನು ನೀಡಿರುತ್ತೇನೆ.

ನಾನು ಈಗ ನ್ಯಾಯಾಲಯದಲ್ಲಿ ಸ್ವತ್ತು ಸ್ವಾಧೀನತಾ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿರಡಿಯಲ್ಲಿ ಪ್ರಮಾಣಪತ್ರವನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು,

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ–5(ಎ) ಎಂದು ಗುರುತಿಸಲಾಯಿತು.

ನಾನು ಫೋಟೋ ತೆಗೆಯುವ ಸಮಯ ಮಳೆಯು ಬರುತ್ತಿದ್ದು, ಆ ಸಮಯದಲ್ಲಿ ಆರೋಪಿಯು ತನ್ನ ಕೆಂಪು ವಾಹನದಲ್ಲಿ ಸಂಚರಿಸುತ್ತಿದ್ದು, ಮಳೆ ಬರುತ್ತಿದ್ದ ಕಾರಣದಿಂದಾಗಿ ಫೋಟೋ blur ಆಗಿ ಬಂದಿರುತ್ತದೆ. ನಾನು ಈಗ ನ್ಯಾಯಾಲಯದಲ್ಲಿ ಸದರಿ ಎರಡು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–6 ಹಾಗೂ 7 ಎಂದು, ಸದರಿ ನಿಪಿ–6 ಹಾಗೂ 7 ಕ್ಕೆ ಹಾಗೂ ಚಿತ್ರೀಕರಣಕ್ಕೆ ಸಂಬಂಧಿಸಿದಂತೆ ಸಿ.ಡಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–8 ಎಂದು ಗುರುತಿಸಲಾಯಿತು.

ನಾನು ನಿಪಿ–1 ರ ಪಿರ್ಯಾದಿಯನ್ನು ಪೊಲೀಸರಿಗೆ ನೀಡುವ ಸಮಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ದೇವಚಳ್ಳ ಗ್ರಾಮ ಪಂಚಾಯತ್‌ನ ಕಾರ್ಯಪಡೆಯ ಸದಸ್ಯರ ಪಟ್ಟಿಯನ್ನು ನೀಡಿರುತ್ತೇನೆ. ಸದರಿ ಪಟ್ಟಿಯನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–9 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ–9(ಎ) ಎಂದು ಗುರುತಿಸಲಾಯಿತು.

ನಾನು ಪೊಲೀಸರಿಗೆ ward level task force ಸದಸ್ಯರ ಪಟ್ಟಿಯನ್ನು ನೀಡಿದ್ದು, ಅದನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದು, ಅದನ್ನು

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಿಪಿ-10 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿಗುರುತಿಸಿದ್ದು, ಅದನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಆರೋಗ್ಯ ಇಲಾಖೆಯಲ್ಲಿ ದಿನನಿತ್ಯ ದಾಖಲಾದ ಕೋವಿಡ್ ಸೊಂಕಿತರ ಪಟ್ಟಿಯನ್ನು ನಾನು ಪೋಲೀಸರಿಗೆ ಹಾಜುರಪಡಿಸಿದ್ದು, ಅದನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-11 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿಗುರುತಿಸಿದ್ದು, ಅದನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಜಿಲ್ಲಾಧಿಕಾರಿಯವರ ನಡವಳಿಯನ್ನು ನಾನು ಪೊಲೀಸರಿಗೆ ಹಾಜರುಪಡಿಸಿದ್ದು, ಅದನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-12 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

ಸುಳ್ಯ ತಾಲೂಕು ಕಾರ್ಯ ನಿರ್ವಾಹಕ ದಂಡಾಧಿಕಾರಿಯವರ ನಡವಳಿಯನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-13 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಸದರಿ ಎಲ್ಲಾ ದಾಖಲೆಗಳನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ಗೈರು ಹಾಜರಾಗಿದ್ದು, ಅವರನ್ನು ಗುರುತಿಸುವಲ್ಲಿ ಆರೋಪಿ ಪರ ವಕೀಲರು ಯಾವುದೇ ತಗಾದೆ ಎತ್ತಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಕೆ.ಎಂ. ವಕೀಲರಿಂದಃ**

ನಾನು ದೇವಚಳ್ಳ ಗ್ರಾಮ ಪಂಚಾಯತಿನಲ್ಲಿ ಪ್ರಭಾರ ಪಿ.ಡಿ.ಒ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಬಗ್ಗೆ ನಾನು ದಾಖಲೆ ಪತ್ರವನ್ನು ಪೊಲೀಸರಿಗೆ ನೀಡಿದ್ದೀರಾ ಎಂದರೆ ಸಾಕ್ಷಿಯು ಪೊಲೀಸರು, ತನಿಖಾಧಿಕಾರಿಯವರು ನನ್ನಲ್ಲಿ ಸದರಿ ದಾಖಲೆ ಪತ್ರವನ್ನು ಕೇಳದ ಕಾರಣ ನಾನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿಯು ಕೋವಿಡ್ ಸೋಂಕಿತ ಎಂದು ನಮಗೆ ದೈನಂದಿನವಾಗಿ ಆರೋಗ್ಯ ಇಲಾಖೆಯಿಂದ ಸೋಂಕಿತರ ಪಟ್ಟಿ ಬರುತ್ತಿದ್ದು, ಆ ಪ್ರಕಾರ ನಮಗೆ ಆರೋಪಿಯು ಕೋವಿಡ್ ಸೋಂಕಿತ ಎಂದು ತಿಳಿದು ಬಂದಿರುತ್ತದೆ. ಆರೋಪಿಯು ದಿನಾಂಕ 09−06−2021 ರಂದು ಆರೋಗ್ಯ ಇಲಾಖೆಯಿಂದ ನಮಗೆ ಬಂದ ಪಟ್ಟಿಯ ಪ್ರಕಾರ ಆರೋಪಿಯು ಕೋವಿಡ್ ಸೋಂಕಿತ ಎಂದು ನಮಗೆ ತಿಳಿದು ಬಂದಿರುತ್ತದೆ. ಬೆಳಗ್ಗೆ 10.00 ಗಂಟೆಗೆ ನಮಗೆ ಆರೋಗ್ಯ ಇಲಾಖೆಯಿಂದ ಕೋವಿಡ್ ಸೋಂಕಿತರ ಪಟ್ಟಿ ಬರುತ್ತಿತ್ತು. ಆರೋಗ್ಯ ಇಲಾಖೆಯಿಂದ ನಮಗೆ ಮಾಹಿತಿ ಬಂದ ಕೂಡಲೇ ನಾವು ಸೋಂಕಿತ ಪಟ್ಟಿ ಪ್ರಕಾರ ಆರೋಪಿಯ ಮನೆಗೆ ಹೋಗಿ ಆರೋಪಿಗೆ home isolation ನಲ್ಲಿ ಇರಬೇಕೆಂದು ನಾವು ಸೂಚಿಸಿರುತ್ತೇವೆ. ಆರೋಪಿಯ

ಮನೆಗೆ ನಾನು, ಚಾ.ಸಾ.2, ಚಾ.ಸಾ. 3, ಸಮಿತಿಯ ಸದಸ್ಯರಾದ ಚಾ.ಸಾ.5 ಹಾಗೂ ಚಾ.ಸಾ.6 ರವರು ಬೆಳಗ್ಗೆ 10.30 ಗಂಟೆಗೆ ಹೋಗಿರುತ್ತೇವೆ.

ದಿನಾಂಕ 09–06–2021 ರಂದು ನಾವು ಹೋದ ಸಮಯದಲ್ಲಿ ಆರೋಪಿಯು ಬಾಳೆಗುಡ್ಡೆ ಎಂಬಲ್ಲಿ ಸಂಚರಿಸುತ್ತಿದ್ದರು. ಬಾಳೆಗುಡ್ಡೆ ಎಂಬಲ್ಲಿಗೆ ನಾವು ಅಂದಾಜು ಮಧ್ಯಾಹ್ನ ಹೋಗಿರುತ್ತೇವೆ. ಆರೋಪಿಯ ಮನೆಗೆ ನಾವು ಹೋಗಿದ್ದು, ಮಧ್ಯಾಹ್ನದ ಸಮಯದಲ್ಲಿ ಆರೋಪಿಯು ಅಲ್ಲಿ ತಿರುಗಾಡುತ್ತಿದ್ದರು. ಸಾಕ್ಷಿಯು ಮುಂದುವರೆದು ದಿನಾಂಕ 09–06–2021 ರಂದು ಆರೋಪಿಯು ಅವರ ಮನೆಯಲ್ಲಿ ಇದ್ದರು. ಆಗ ನಾವು ಆರೋಪಿಗೆ ಸೂಚನೆಯನ್ನು ನೀಡಿರುತ್ತೇವೆ. ದಿನಾಂಕ 14–06–2021 ರಂದು ನಾವು ಆರೋಪಿಯ ಮನೆಗೆ ಹೋದ ಸಮಯದಲ್ಲಿ ಆರೋಪಿ ತಿರುಗಾಡುತ್ತಿದ್ದರು ಎಂದು ನುಡಿಯುತ್ತಾರೆ.

ನಮ್ಮ ಕಚೇರಿಯಿಂದ ಕಂದ್ರಪ್ಪಾಡಿಗೆ ಸುಮಾರು 3 ಕಿಲೋ ಮೀಟರು ದೂರವಿರುತ್ತದೆ. ಕಂದ್ರಪ್ಪಾಡಿಯಿಂದ ಆರೋಪಿಯ ಮನೆಗೆ 100 ಮೀಟರು ದೂರವಿರುತ್ತದೆ. ಕಂದ್ರಪ್ಪಾಡಿಯಿಂದ ಬಾಳೆಗುಡ್ಡೆಗೆ 300–400 ಮೀಟರು ದೂರವಿರುತ್ತದೆ. ಕಂದ್ರಪ್ಪಾಡಿಯಿಂದ ಬಾಳೆಗುಡ್ಡೆಗೆ ಎಷ್ಟು ದೂರವಿದೆ ಎಂದು ನಿಖರವಾಗಿ ಹೇಳಲು ನನಗೆ ಸಾಧ್ಯವಿಲ್ಲ.

ದಿನಾಂಕ 14–06–2021 ರಂದು ಆರೋಪಿಯು ನಿಖರವಾಗಿ ಕಂದ್ರಪ್ಪಾಡಿ ಸ್ಥಳದಿಂದ ಬಾಳೆಗುಡ್ಡೆಗೆ ಹೋಗುವ ರಸ್ತೆಯಲ್ಲಿ ತಿರುಗಾಡುತ್ತಿದ್ದರು. ನಾವು

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಆರೋಪಿಯ ಮನೆಗೆ ಹೋದಾಗ ಆರೋಪಿಯ ಮನೆಯಲ್ಲಿ ಯಾರು–ಯಾರು ಇದ್ದರೆಂದು ನನಗೆ ತಿಳಿದಿರುವುದಿಲ್ಲ. ಆರೋಪಿಯ ಮನೆಯ ಬಳಿ ಒಂದು ದೇವಸ್ಥಾನವಿದ್ದು, ಸದರಿ ದೇವಸ್ಥಾನದಲ್ಲಿ ಪೂಜೆ ನಡೆಯದ ಕಾರಣ, ಅಲ್ಲಿ ಯಾವ ಜನರು ಇರಲಿಲ್ಲ.

ಆರೋಪಿಯನ್ನು isolation ಮಾಡಲು ಸುಳ್ಯ ತಹಶೀಲ್ದಾರದಿಂದ ಯಾವ ದಿನಾಂಕದಂದು ಆದೇಶ ಬಂದಿರುತ್ತದೆ ಎಂದು ನನಗೆ ನಿಖರವಾದ ದಿನಾಂಕ ತಿಳಿದಿರುವುದಿಲ್ಲ. ಆರೋಪಿಯನ್ನು isolation ಮಾಡಲು ಬಂದ ಆದೇಶದ ಮೇರೆಗೆ ನಾವು ಸಮಿತಿಯವರನ್ನು ಒಳಗೊಂಡ ಒಂದು ಸಭೆಯನ್ನು ಮಾಡಿ, ಸದರಿ ಸಭೆಯಲ್ಲಿ ನಿರ್ಣಯ ಮಾಡಿಕೊಂಡಿರುತ್ತೇವೆ. ಸದರಿ ನಿರ್ಣಯದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ದಿನಾಂಕ 14–06–2021 ರಂದು ಬೆಳಗ್ಗೆ Task force ಸಮಿತಿಯನ್ನು ನಾವು ಸಮಿತಿಯವರು ಸೇರಿಕೊಂಡು ಮಾಡಿರುತ್ತೇವೆ. Task force ಸಮಿತಿಯಲ್ಲಿ ಆದ ಸಭೆಯ ಕುರಿತು ಮಾಹಿತಿಯನ್ನು ಆರೋಪಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ಆರೋಪಿಗೆ ನಾವು " ನಿಮಗೆ ಕೋವಿಡ್ ತಗಲಿದ್ದು ಆ ಕುರಿತು ನೀವು home isolation ನಲ್ಲಿ ಇರಬೇಕು " ಎಂದು ತಿಳಿಸಿರುತ್ತೇವೆ. ಅಂದಾಜು ಬೆಳಗ್ಗೆ 9.00 ಗಂಟೆಗೆ ಆರೋಪಿಗೆ ಸದರಿ ಸೂಚನೆಯನ್ನು ನೀಡಿರುತ್ತೇವೆ , ಆದರೆ ನಿಖರವಾಗಿ ಎಷ್ಟು

ಸಾಕ್ಷಿಯ ಸಹಿ                    ನ್ಯಾಯಾಧೀಶರ ಸಹಿ

ಗಂಟೆಗೆ ಆರೋಪಿಗೆ ಸದರಿ ಸೂಚನೆಯನ್ನು ನೀಡಿರುತ್ತೇವೆ ಎಂದು ನನಗೆ ತಿಳಿದಿರುವುದಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸೋಂಕಿತರ ಪಟ್ಟಿಯಲ್ಲಿರುವ ಸೋಂಕಿತರ ಮನೆಗೆ ನಾವು ಹೋಗಿದ್ದು, ಆದರೆ ಯಾವ ದಿನಾಂಕದಂದು ನಿಖರವಾಗಿ ಹೋಗಿ ಮಾಹಿತಿಯನ್ನು ತಿಳಿಸಿರುತ್ತೇವೆಂದು ನನಗೆ ದಿನಾಂಕದ ಬಗ್ಗೆ ನಿಖರವಾಗಿ ತಿಳಿದಿರುವುದಿಲ್ಲ.

ನಾನು home isolation ನಲ್ಲಿ ಇರಲಿಲ್ಲ. ಯಾವುದೇ ಕೊರೋನಾ ಪೀಡಿತ ವ್ಯಕ್ತಿ ಒಬ್ಬ ವ್ಯಕ್ತಿಯನ್ನು ಮುಟ್ಟಿದರೆ, ಅವರನ್ನು ಸಹ home isolation ನಲ್ಲಿ ಇಡಬೇಕೆಂದು ಕೋವಿಡ್ ನಿಯಮಾವಳಿ ಇದ್ದು, ಅದನ್ನು ನಾನು ಉಲ್ಲಂಘಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನನ್ನು ತಳ್ಳಿದ್ದೂ ಇಲ್ಲ, ನಾನು ಆರೋಪಿಗೆ ಆರೋಗ್ಯ ಇಲಾಖೆಯವರು ನೀಡಿದ ಮಾಹಿತಿಯನ್ನು ಹಾಗೂ ಸೂಚನೆಯನ್ನು ನೀಡುವ ಸಮಯದಲ್ಲಿ ಆರೋಪಿಯು ನಿಯಮಾವಳಿಗಳನ್ನು ಉಲ್ಲಂಘಿಸಿದ್ದೂ ಇಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು 3 ಫೀಟ್ ಅಂತರದಿಂದ ಮಾತನಾಡಿಸಿರುತ್ತೇನೆ. ಆರೋಪಿಯು ಆಗ ವಾಹನದಲ್ಲಿ ಇದ್ದರು. ಆರೋಪಿಯು ಆ ಸಮಯದಲ್ಲಿ ನಮ್ಮಿಂದ ತಪ್ಪಿಸಿಕೊಂಡು ಅವರಿದ್ದ ವಾಹನದಲ್ಲಿ ಹೋಗಿರುತ್ತಾರೆ. ನಿಪಿ-6 ಹಾಗೂ 7 ರ ಛಾಯಾಚಿತ್ರಗಳನ್ನು ನಾನೇ ನನ್ನ ಮೊಬೈಲ್ ನಿಂದ ಸೆರೆಹಿಡಿದಿರುತ್ತೇನೆ. ನಿಪಿ-6 ಹಾಗೂ 7 ರ ಛಾಯಾಚಿತ್ರಗಳನ್ನು ನೋಡಿದಾಗ, ಸದರಿ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ವ್ಯಕ್ತಿಯು ಆರೋಪಿಯೇ ಎಂದು ಹೇಳಲು ಕಷ್ಟಸಾಧ್ಯ ಎಂದರೆ ಸಾಕ್ಷಿಯು ಸದರಿ ನಿಪಿ-6 ಹಾಗೂ 7 ರ ಛಾಯಾಚಿತ್ರಗಳನ್ನು ನಾನು ಮಳೆ ಬಂದ ಸಮಯದಲ್ಲಿ ತೆಗೆದ ಕಾರಣ, ಸದರಿ ಛಾಯಾಚಿತ್ರಗಳು blur ಆಗಿ ಬಂದಿರುತ್ತವೆ ಎಂದು ನುಡಿಯುತ್ತಾರೆ. ನಿಪಿ-6 ಹಾಗೂ 7 ರ ಛಾಯಾಚಿತ್ರಗಳನ್ನು ನಾನು ದಿನಾಂಕ 14-06-2021 ರಂದು ಸೆರೆಹಿಡಿದಿರುತ್ತೇನೆ. ನಿಪಿ-6 ಹಾಗೂ 7 ರ ಛಾಯಾಚಿತ್ರಗಳಲ್ಲಿ ಯಾವುದೇ ದಿನಾಂಕ ನಮೂದಾಗಿರುವುದಿಲ್ಲ ಎಂದರೆ ಸರಿ. ನನ್ನ ಮೊಬೈಲ್ ನಲ್ಲಿ ಜಿ.ಪಿ.ಎಸ್. ತಂತ್ರಾಂಶ ಇದೆಯೇ ಎಂದರೆ ಸಾಕ್ಷಿಯು ಸದರಿ ಸಮಯದಲ್ಲಿ ಮಾತುಕತೆ ಜೋರಾಗಿ ನಡೆದಿದ್ದರಿಂದ ಹಾಗೂ ಆ ಸಮಯದಲ್ಲಿ ಜಿ.ಪಿ.ಎಸ್. ತಂತ್ರಾಂಶವನ್ನು ಅಳವಡಿಸಿ ಫೋಟೋವನ್ನು ತೆಗೆಯಲು ನನಗೆ ಕಾಲಾವಕಾಶ ಸಿಗದ ಕಾರಣ ನಾನು ಜಿ.ಪಿ.ಎಸ್. ತಂತ್ರಾಂಶವನ್ನು ಅಳವಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-6 ಹಾಗೂ 7 ರ ಛಾಯಾಚಿತ್ರಗಳನ್ನು ನೋಡುವಾಗ ವಾಹನದ ನೋಂದಣಿ ನಂಬ್ರ ಕಾಣುವುದಿಲ್ಲ ಎಂದರೆ ಸಾಕ್ಷಿಯು ಫೋಟೋಗಳನ್ನು ವಾಹನದ ಹತ್ತಿರದಿಂದ ತೆಗೆದ ಕಾರಣ ಅದರ ನೋಂದಣಿ ನಂಬ್ರ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-6 ಹಾಗೂ 7 ರ ಛಾಯಾಚಿತ್ರಗಳನ್ನು ನಾನು ನನ್ನ Android ಕಂಪನಿಯ ಮೊಬೈಲ್ ನಿಂದ ಸೆರೆ ಹಿಡಿದಿದ್ದು, ನಿಖರವಾಗಿ ಯಾವ ಕಂಪನಿಯ ನನ್ನ ಮೊಬೈಲ್‌ನಿಂದ ಸೆರೆ ಹಿಡಿದದ್ದು ಎಂದು ನನಗೆ ತಿಳಿದಿರುವುದಿಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಿಪಿ-8 ರ ಸಿ.ಡಿ.ಯು ಯಾವ ಕಂಪನಿಯದ್ದು ಎಂದು ನನಗೆ ತಿಳಿದಿರುವುದಿಲ್ಲ.

ಪಿರ್ಯಾದಿಯನ್ನು ನಾನೇ ನಮ್ಮ ಕಚೇರಿಯಲ್ಲಿ ಬೆರಳಚ್ಚುಪಡಿಸಿ, ಪ್ರಿಂಟನ್ನು ನಾನು ತೆಗೆದಿರುತ್ತೇನೆ. ನಿಪಿ-1 ರ ಪಿರ್ಯಾದಿಯನ್ನು ನಮ್ಮ ಮೇಲಧಿಕಾರಿಯಾದ ಕಾರ್ಯ ನಿರ್ವಾಹಕ ಅಧಿಕಾರಿಯವರು ನೀಡಿದ ಸೂಚನೆ ಮೇರೆಗೆ ನಾನು ನೀಡಿರುತ್ತೇನೆ.

ತಕ್ಷೀರು ಸ್ಥಳವು ನಮ್ಮ ಕಚೇರಿಯಿಂದ ಸುಮಾರು 3 ಕಿಲೋ ಮೀಟರು ದೂರವಿರುತ್ತದೆ. ನಮ್ಮ ಕಚೇರಿಯಿಂದ ಸುಬ್ರಹ್ಮಣ್ಯ ಪೊಲೀಸ್ ಠಾಣೆಯು ಸುಮಾರು 22 ಕಿಲೋ ಮೀಟರು ದೂರವಿರುತ್ತದೆ.

ಆರೋಪಿಯು ನಮ್ಮಿಂದ ತಪ್ಪಿಸಿಕೊಂಡು ಹೋಗಿ ಅವಿತು ಕುಳಿತಿದ್ದ ಉರುಂಬಿ ಎಂಬ ಸ್ಥಳದಲ್ಲಿ ಆರೋಪಿ ಮಾತ್ರ ಇದ್ದರು. ಆರೋಪಿಯ ಮನೆಯಿಂದ ಉರುಂಬಿ ಎಂಬ ಸ್ಥಳಕ್ಕೆ ಎಷ್ಟು ದೂರವಿದೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಉರುಂಬಿ ಎಂಬ ಸ್ಥಳಕ್ಕೆ ಒಳಲಂಬೆ ದೇವಸ್ಥಾನದ ಎದುರುಗಡೆ ಇರುವ ರಸ್ತೆ ಮೂಲಕ ಹೋಗಬೇಕಾಗುತ್ತದೆ. ತಕ್ಷೀರು ಸ್ಥಳಕ್ಕೆ ಪೊಲೀಸರು ಮಧ್ಯಾಹ್ನದ ಹೊತ್ತಿಗೆ ಬಂದಿರುತ್ತಾರೆ. ಉರುಂಬಿ ಎಂಬ ಸ್ಥಳವು ಆರೋಪಿಯ ಮನೆಯೋ ಹಾಗೂ ಸದರಿ ಮನೆಯ ಮಾಲೀಕರು ಯಾರು ಎಂದು ನನಗೆ ತಿಳಿದಿರುವುದಿಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಆರೋಪಿಯು ಕೋವಿಡ್ ನ ಯಾವುದೇ ನಿಯಮವನ್ನು ಉಲ್ಲಂಘಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯನ್ನು ನೀಡಿದ ಮರುದಿನದಂದು ಪೊಲೀಸರು ತಕ್ಷೀರು ಸ್ಥಳದ ಮಹಜರನ್ನು ತಯಾರಿಸಿರುತ್ತಾರೆ. ಆದರೆ ನಿಖರವಾಗಿ ಯಾವ ದಿನಾಂಕದಂದು ಪೊಲಿಸರು ತಕ್ಷೀರು ಸ್ಥಳದ ಮಹಜರನ್ನು ತಯಾರಿಸಿರುತ್ತಾರೆಂದು ನನಗೆ ಈಗ ನೆನಪಿರುವುದಿಲ್ಲ. ನಿಖರವಾಗಿ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಪೊಲೀಸರು ಮಹಜರನ್ನು ಜರಗಿಸಿರುತ್ತಾರೆಂದು ನನಗೆ ತಿಳಿದಿರುವುದಿಲ್ಲ. ಪೊಲೀಸರು ಮಹಜರನ್ನು ಮಾಡುವ ಸಮಯ ನನಗೆ ನೋಟೀಸನ್ನು ಮಾಡಿರುವುದಿಲ್ಲ, ಆದರೆ ಫೋನ್ ಮೂಲಕ ನನಗೆ ತಿಳಿಸಿರುತ್ತಾರೆ. ಆದರೆ ನಿಖರವಾಗಿ ಯಾವ ದಿನಾಂಕದಂದು ಫೋನ್ ಮೂಲಕ ಪೊಲೀಸರು ನನಗೆ ತಿಳಿಸಿದ್ದರು ಎಂದು ನನಗೆ ತಿಳಿದಿರುವುದಿಲ್ಲ. ತಕ್ಷೀರು ಸ್ಥಳದ ಮಹಜರನ್ನು ಯಾವ ಪೊಲೀಸರು ತಯಾರಿಸಿರುತ್ತಾರೆಂದು ಅವರ ಹೆಸರು ನನಗೆ ತಿಳಿದಿರುವುದಿಲ್ಲ. ತಕ್ಷೀರು ಸ್ಥಳದ ಮಹಜರು ಮಾಡುವ ಸಮಯದಲ್ಲಿ ಇಬ್ಬರು ಸಾಕ್ಷಿದಾರರು ಇದ್ದು, ಅವರಲ್ಲಿ ಒಬ್ಬರು ಗೋಪಾಲ್ ರವರು ಆಗಿದ್ದರು. ಮಹಜರು ಸಮಯದಲ್ಲಿ ಸಮಿತಿಯ ಸದಸ್ಯರು ತಕ್ಷೀರು ಸ್ಥಳದಲ್ಲಿ ಹಾಜರಿದ್ದರು.

ನಾನು ಕೊರೋನಾ ಕರ್ತವ್ಯದಲ್ಲಿದ್ದ ಬಗ್ಗೆ ದಾಖಲೆಗಳನ್ನು ಪೊಲೀಸರಿಗೆ ನೀಡಿರುವುದಿಲ್ಲ. ನಮ್ಮ Task force ಸಮಿತಿಯ ಹಾಗೂ ಸಮಿತಿಯ ಸದಸ್ಯರು ಕರ್ತವ್ಯದಲ್ಲಿ ಇದ್ದ ಬಗ್ಗೆ ನಾನು ದಾಖಲೆಗಳನ್ನು ಪೊಲೀಸರಿಗೆ ನೀಡಿರುತ್ತೇನೆ. ಸದರಿ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಸಮಿತಿಯ ದಿನಚರಿ ವಹಿಗಳನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ. ಸದರಿ ದಿನಚರಿ ವಹಿ ದಾಖಲೆಗಳನ್ನು ಪೊಲೀಸರಿಗೆ ಕೊಡಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಪೊಲೀಸರು ಕೇಳದ ಕಾರಣ ನಾನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

ಕೊರೋನಾ ಕಾಲದಲ್ಲಿ ಜನರಿಗೆ ಭಯ ಭೀತಿಯನ್ನುಂಟು ಮಾಡುವ ವಿಚಾರ ನಮ್ಮ ಮೇಲೆ ಇತ್ತು ಎಂದರೆ ಸಾಕ್ಷಿಯು ರೋಗವನ್ನು ಹರಡದಂತೆ ತಗಲುವ ಜವಾಬ್ದಾರಿ ನಮ್ಮ ಮೇಲೆ ಇತ್ತು ಎಂದು ನುಡಿಯುತ್ತಾರೆ. ಆ ಕಾರಣಕ್ಕೋಸ್ಕರ ನಾವು ನಮ್ಮ ಮೇಲಧಿಕಾರಿಯವರ ಸೂಚನೆ ಮೇರೆಗೆ ಈ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ದಿನಾಂಕ 09-06-2021 ರಂದು ಆರೋಪಿಯು ತಿರುಗಾಡುತ್ತಿದ್ದರು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿದ್ದು, ಸದರಿ ದಿನದಂದು ಆರೋಪಿಯ ವಿರುದ್ಧ ಪೊಲೀಸ್ ದೂರನ್ನು ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆರೋಪಿಯು ದಿನಾಂಕ 14-06-2021 ರಂದು ತಿರುಗಾಡುತ್ತಿದ್ದು, ನಂತರದಲ್ಲಿ ನಾನು ಪೊಲೀಸ್ ದೂರನ್ನು ನೀಡಿರುತ್ತೇನೆಂದು ನುಡಿಯುತ್ತಾರೆ. ಆರೋಪಿಯು ತಿರುಗಾಡುತ್ತಿದ್ದರು ಎಂಬ ಮಾಹಿತಿಯನ್ನು ಯಾರು ನೀಡಿದ್ದರು ಎಂದರೆ ಸಾಕ್ಷಿಯು ನಾನು ಗ್ರಾಮ ಭೇಟಿ ಮಾಡುವ ಸಮಯ ನಾವೇ ಸ್ವತಃ ಆರೋಪಿಯು ತಿರುಗಾಡುತ್ತಿದ್ದುದ್ದನ್ನು ನೋಡಿರುತ್ತೇನೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಿಪಿ-12 ರ ಪ್ರಕಾರವೇ ನಾನು ಕೊರೋನಾ ಕಾಲದಲ್ಲಿ ಕಾರ್ಯಾಚರಣೆ ಮಾಡುತ್ತಿದ್ದೆ ಎಂದರೆ ಸರಿ. ನಿಪಿ-9 ನ್ನು ನಾನು ಸ್ವತಃ ತಯಾರಿಸಿರುತ್ತೇನೆ. ನಿಪಿ-11 ರ ದಾಖಲೆಯನ್ನು ಸ್ವತಃ ನಾನು ತಯಾರಿಸಿರುವುದಿಲ್ಲ , ಸದರಿ ದಾಖಲೆಯು ಆರೋಗ್ಯ ಇಲಾಖೆಯವರು ತಯಾರಿಸಿದ ಪಟ್ಟಿಯಾಗಿರುತ್ತದೆ.

ಸಾಮಾನ್ಯವಾಗಿ ಕೋವಿಡ್ ಸೋಂಕಿತ ವ್ಯಕ್ತಿಗಳನ್ನು ಒಮ್ಮೆಗೆ ನೋಡಿದಾಗ ಸದರಿ ವ್ಯಕ್ತಿಗಳು ಕೋವಿಡ್ ಸೋಂಕಿತ ವ್ಯಕ್ತಿ ಎಂದು ಹೇಳಲು ನನಗೆ ಬರುವುದಿಲ್ಲ ಎಂದರೆ ಸರಿ. ಕೋವಿಡ್ ಸೋಂಕಿತ ವ್ಯಕ್ತಿಗಳ ಆರೋಗ್ಯಕ್ಕೆ ಸಂಬಂಧಪಟ್ಟ ಎಲ್ಲಾ ಜವಾಬ್ದಾರಿಗಳು ಆರೋಗ್ಯ ಇಲಾಖೆಯವರಿಗೆ ಇರುತ್ತದೆ ಎಂದರೆ ಸರಿ.

ನಾನು ತಕ್ಷೀರು ಸ್ಥಳಕ್ಕೆ ಹೋದದ್ದೂ ಇಲ್ಲ, ಪೊಲೀಸರು ತಕ್ಷೀರು ಸ್ಥಳದ ಮಹಜರನ್ನು ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆ ಪತ್ರಗಳಿಗೂ ಪ್ರಸ್ತುತ ಪ್ರಕರಣದ ಘಟನೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿಪಿ-6 ಹಾಗೂ 7 ರ ಫೋಟೋಗಳಿಗೂ, ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-6 ಹಾಗೂ 7 ರಲ್ಲಿರುವ ಫೋಟೋ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮಗೆ ಜೀವ ಬೆದರಿಕೆಯನ್ನು ಒಡ್ಡಿದ್ದಾಗಲೀ, ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾಗಲೀ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಧಿಕಾರಿಗಳ ನಿರ್ದೇಶನದಂತೆ ಜನರಲ್ಲಿ ಜಾಗೃತಿ ಮೂಡಿಸಲು ಆರೋಪಿಯ ವಿರುದ್ಧ ಈ ಪ್ರಕರಣವನ್ನು

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.

ಸಾಕ್ಷಿಯ ಸಹಿ

ನ್ಯಾಯಾಧೀಶರ ಸಹಿ